ಆ) ಸದರಿ ಅಧಿಕಾರಿಯಿಂದ ಪರಿಣಾಮಕಾರಿ ಆಡಳಿತ ವ್ಯವಸ್ಥೆಯ ಪ್ರವಾಸಕ್ಕೆ ಜೀಪು ಅಗತ್ಯವಿರುವುದು ಸರ್ಕಾರಕ್ಕೆ ಮನವರಿಕೆಯಾಗಿದೆಯೇ?

ಇ) ಹಾಗಿದ್ದಲ್ಲಿ ಸದರಿ ಕಛೇರಿಗೆ ಜೀಪನ್ನು ಒದಗಿಸಲು ಸರ್ಕಾರವು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಆ) ಹೌದು. ಬಂದಿದೆ.

ಆ) ಸರ್ಕಾರಕ್ಕೆ ಮನವರಿಕೆಯಾಗಿದೆ.

ಇ) ರಾಜ್ಯದಲ್ಲಿ 190 ರೇಂಜುಗಳಿದ್ದು, ಎಲ್ಲಾ ರೇಂಜುಗಳಿಗೂ ಜೀಪುಗಳನ್ನು ಹಂತ ಹಂತವಾಗಿ ಒದಗಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು ಇದುವರೆವಿಗೂ 110 ಮಾತ್ರ ಮಂಜೂರಾಗಿದೆ. ಆಯಾ ರೇಂಜುಗಳ ಅಗತ್ಯತೆ ಹಾಗೂ ಜೀಪುಗಳ ಪೂರೈಕೆ ಆಧಾರದ ಮೇಲೆ ರೇಂಜುಗಳಿಗೆ ಮಂಜೂರಾತಿ ನೀಡಲಾಗುತ್ತಿದೆ. ಕುಂದಾಪುರ ರೇಂಜಿನ ಅಗತ್ಯತೆಯನ್ನು ಸರ್ಕಾರ ಗಮನದಲ್ಲಿಟ್ಟುಕೊಂಡಿದೆ.

ವಿಷಯ:- ಶಿರಾ ತಾಲ್ಲೂಕು ಕಿಲಾರದಹಳ್ಳಿ ಕೆರೆಗೆ ಅರಣ್ಯ ಪ್ರದೇಶ ಬಿಡುಗಡೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 443 (643)

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿರಾ ತಾಲ್ಲೂಕು ಕಿಲಾರದಹಳ್ಳಿ ಕೆರೆಯ ನಿರ್ಮಾಣಕ್ಕಾಗಿ ಮುಳುಗಡೆಯಾಗಲಿರುವ ಅರಣ್ಯ ಪ್ರದೇಶದ ಬಿಡುಗಡೆಗಾಗಿ ಹಲವಾರು ವರ್ಷಗಳಿಂದ ಅರಣ್ಯ ಇಲಾಖೆಯಲ್ಲಿ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅರಣ್ಯ ಪಟ್ಟಿಯಿಂದ ಬಿಡುಗಡೆಗೆ ವಿಳಂಬವಾಗಲು ಕಾರಣವೇನು?

ಇ) ಅರಣ್ಯ ಖಾತೆಯಿಂದ ಇನ್ನು ಎಷ್ಟು ದಿನಗಳಲ್ಲಿ ಜಮೀನನ್ನು ಬಿಡುಗಡೆ ಮಾಡಲಾಗುವುದು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು):-

ಅ) 1994-95ನೇ ಸಾಲಿನಲ್ಲಿ ಅರಣ್ಯ ಜಮೀನು ಬಿಡುಗಡೆ ಕೋರಿ ಪ್ರಸ್ತಾವನೆ ಅರಣ್ಯ ಇಲಾಖೆಗೆ ಬಂದಿರುತ್ತದೆ. ಅರಣ್ಯ (ಸಂರಕ್ಷಣಾ) ಕಾಯ್ದೆ 1980ರಂತೆ ಪ್ರಸ್ತಾವನೆ ಸಿದ್ಧಗೊಳಿಸಲು ಹಾಗೂ ಸಂಬಂಧಿಸಿದ ನೀರಾವರಿ ಇಲಾಖೆಯಿಂದ ಮಾಹಿತಿ ಸಂಗ್ರಹಿಸಲು ವಿಳಂಬವಾಗಿರುವುದರಿಂದ ಅರಣ್ಯ ಜಮೀನು ಬಿಡುಗಡೆಗೆ ವಿಳಂಬವಾಗಿದೆ.

ಆ) ಅರಣ್ಯ ಜಮೀನನ್ನು ಅರಣ್ಯೇತರ ಉದ್ದೇಶಕ್ಕಾಗಿ ಬಿಡುಗಡೆ ಮಾಡಬೇಕಾದರೆ ಕೇಂದ್ರ ಅರಣ್ಯ (ಸಂರಕ್ಷಣಾ) ಕಾಯ್ದೆ, 1980ರ ಪ್ರಕಾರ ಕೇಂದ್ರ ಸರ್ಕಾರದ ಅನುಮೋದನೆ ಬೇಕಾಗಿದ್ದು, ಈಗಾಗಲೇ ರಾಜ್ಯ ಸರ್ಕಾರದಿಂದ ಶಿಫಾರಸ್ಸು ಮಾಡಲಾಗಿದೆ. ಕೇಂದ್ರ ಸರ್ಕಾರದ ಅನುಮೋದನೆ ಬರದೆ ಇರುವುದರಿಂದ ಅರಣ್ಯ ಜಮೀನು ಬಿಡುಗಡೆ ಮಾಡಲು ವಿಳಂಬವಾಗಿದೆ.

ಇ) ಕೇಂದ್ರ ಸರ್ಕಾರಕ್ಕೆ ಪತ್ರ ವ್ಯವಹರಿಸಿ ಬೇಗನೆ ಅನುಮೋದನೆ ನೀಡಲು ಕೋರಲಾಗುತ್ತಿದೆ. ಅವರಿಂದ ಅನುಮೋದನೆ ಬಂದ ಕೂಡಲೇ ಮುಂದಿನ ಕ್ರಮ ತೆಗೆದುಕೊಳ್ಳಲಾಗುವದು.

ವಿಷಯ:- ಹೊಸದುರ್ಗ ತಾಲ್ಲೂಕಿನಲ್ಲಿ ಅನುದಾನ ಪಡೆದ ಹಿರಿಯ ಪ್ರಾಥಮಿಕ ಶಾಲೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 444 (642)

ಶ್ರೀ ಟಿ.ಜಿ.ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸದುರ್ಗ ತಾಲ್ಲೂಕಿನಲ್ಲಿ ಅನುದಾನವನ್ನು ಪಡೆದ ಹಿರಿಯ ಪ್ರಾಥಮಿಕ ಶಾಲೆಗಳೆಷ್ಟು (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಶಾಲೆಗಳು ಸೇರಿ)

ಆ) ಅನುದಾನ ಎಷ್ಟು ಶಾಲೆಗಳಿಗೆ ಬಿಡುಗಡೆ ಮಾಡಲಾಗಿದೆ?

ಇ) 1987-88ನೇ ಸಾಲಿನಲ್ಲಿ ಪ್ರಾರಂಭವಾದ ಶಾಲೆಗಳಿಗೆ ಅನುದಾನ ನೀಡಲು ಆಧ್ಯತೆಗಳೇನು?

ಉ) ಹೊಸದುರ್ಗ ತಾಲ್ಲೂಕಿನ ಜಾನಕಲ್ ಗ್ರಾಮದ ಪ್ರಿಯದರ್ಶಿನಿ ಹಿರಿಯ ಪ್ರಾಥಮಿಕ ಶಾಲೆಗೆ ಅನುದಾನ ನೀಡದಿರಲು ಕಾರಣವೇನು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) 17.

ಆ) 17.

ಇ) ಶಾಶ್ವತ ಅನುದಾನ ರಹಿತ ಶಾಲೆಗಳು ಎಂದು ಆದೇಶಿಸಿರುವುದರಿಂದ ಅನುದಾನ ನೀಡಲು ಬರುವುದಿಲ್ಲ.

ಈ) 1987-88ನೇ ಸಾಲಿನಿಂದ ಅಂದರೆ 1.6.87ರ ನಂತರದ ಶಾಲೆಗಳೆಲ್ಲಾ ಶಾಶ್ವತ ಅನುದಾನ ರಹಿತ ಶಾಲೆಗಳಾದ್ದರಿಂದ 88-89ರಲ್ಲಿ ಪ್ರಾರಂಭಿಸಿದ ಶಾಲೆಗಳನ್ನು ಸಹ ಅನುದಾನಕ್ಕೆ ಒಳಪಡಿಸಲು ಅವಕಾಶ ಇರುವುದಿಲ್ಲ.